# ಬುದ್ಧ ಮಾರ್ಗ

'ವೈಶಾಖ ಶುದ್ಧ ಪೂರ್ಣಿಮೆ' ಬುದ್ಧ ಭಗವಾನರ ಹುಟ್ಟು, ಅರಿವು ಹಾಗೂ ಮಹಾನಿರ್ವಾಣಗಳೊಂದಿಗೆ (ದೇಹ ತ್ಯಾಗ) ಹೆಣೆದುಕೊಂಡಿದೆ. ಬೌದ್ಧದರ್ಶನದ ದಾರಿಯಲ್ಲಿ ನಡೆಯುವವರಿಗೆ ವೈಶಾಖ ಶುದ್ಧ ಹುಣ್ಣಿಮೆ ಮಹತ್ವಪೂರ್ಣವಾದದ್ದು. ಮಹಾವೀರ ಮತ್ತು ಬುದ್ಧ ಭಗವಾನರ ತತ್ತ್ವದರ್ಶಗಳು ಭಾರತೀಯ ತತ್ತ್ವಚಿಂತನೆ ಮತ್ತು ಚರಿತ್ರೆಯನ್ನೇ ಪಲ್ಲಟಗೊಳಿಸಿದವು. ಬೌದ್ಧದರ್ಶನ 'ಭೂತ'ದ ಬಗ್ಗೆಯಾಗಲಿ, 'ಭವಿಷ್ಯತ್' ಬಗ್ಗೆಯಾಗಲಿ ಸ್ವರ್ಗ, ನರಕ, ಪಾಪ, ಪುಣ್ಯ ಮುಂತಾದ ತಾನು ಕಂಡಿಲ್ಲದ, ತನ್ನ ಅನುಭವಕ್ಕೆ ಬಾರದ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಮಾತನಾಡುವುದಿಲ್ಲ! ಅದು ವರ್ತಮಾನದ ಬದುಕಿನ ಸಂಕಟಗಳ ಬಗ್ಗೆ ಮಾತನಾಡುತ್ತದೆ. ಬೌದ್ಧದರ್ಶನವು ವರ್ತಮಾನದ ಸಂಕಟಗಳನ್ನು ವರ್ತಮಾನದಲ್ಲೇ ಪರಿಹರಿಸಿಕೊಳ್ಳುವ ಬಗ್ಗೆ ದಾರಿ ತೋರುತ್ತದೆ. ಜಾತಿ ಪದ್ಧತಿ, ವರ್ಣಾಶ್ರಮ ಪದ್ಧತಿ, ಲಿಂಗ ಅಸಮಾನತೆ, ಮೇಲು, ಕೀಳು, ವೇದ ಪ್ರಮಾಣ, ಯಜ್ಞ, ಹಿಂಸೆ ಮುಂತಾದುವುಗಳನ್ನು ತಿರಸ್ಕರಿಸಿದೆ. ವಚನ ಮಾರ್ಗದಲ್ಲೂ ಇದೇ ನಿಲುವು ಕಂಡುಬರುತ್ತದೆ. 'ದೇವಲೋಕ–ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರಣ್ಣ / ಸತ್ಯವ ನುಡಿವುದೇ ದೇವಲೋಕ / ಮಿಥ್ಯವ ನುಡಿವುದೇ ಮರ್ತ್ಯಲೋಕ'. ಎಲ್ಲರೂ ಪಾಲಿಸಬಹುದಾದ ಬೋಧನೆಗಳನ್ನು ಬುದ್ಧ ಭಗವಾನರು ದೃಷ್ಟಾಂತ, ಪ್ರವಚನಗಳ ಮೂಲಕ ಅರ್ಥವಾಗುವ ಸರಳ ಭಾಷೆಯಲ್ಲಿ ತಿಳಿಸಿದರು.

ಬೌದ್ಧದರ್ಶನವನ್ನು ಕೇವಲ ಪಂಡಿತರಿಂದ, ಗ್ರಂಥಗಳಿಂದಲೇ ತಿಳಿಯಬೇಕೆಂಬುದಿಲ್ಲ! ಯಾರಿಗೂ ಕೇಡು ಬಯಸದೆ, ಎಲ್ಲರೊಡನೆ ಕೂಡಿ ಬಾಳುವ ನಿಸರ್ಗ ವಿವೇಕವನ್ನು ನಮ್ಮ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ಹೀಗೆ ಬೌದ್ಧಧರ್ಮ ನಡೆಯುವ ಮಾರ್ಗವೇ ಹೊರತು; ಬರಿದೇ ಕೇಳುವ ಧರ್ಮವಲ್ಲ. 'ಧರ್ಮವನ್ನು ನಂಬಿ, ತಿಳಿದು, ನಡೆದರೆ ಬದುಕುವೆವು. ಹಾಗಿಲ್ಲದೆ, ನಂಬಿಯೂ ನಡೆಯದೆ, ನಡೆದರೂ ಡಂಭಕ್ಕಾಗಿ ನಡೆದರೆ ಕೆಡುವೆವು. ಆದ್ದರಿಂದ ಧರ್ಮವನ್ನು ಶ್ರೇಯಸ್ಸಿಗಾಗಿ, ಜೀವಿತವನ್ನು ಉದ್ಧಾರ ಮಾಡಿಕೊಳ್ಳಲು, ತನ್ನ ಜೀವನವನ್ನೇ ಅಲ್ಲದೆ ನೆರೆಹೊರೆಯವರ, ಒಟ್ಟು ಸಮಾಜದ ಜೀವನವನ್ನೇ ಉತ್ತಮಪಡಿಸಲು ಬಳಸಿಕೊಳ್ಳಬೇಕು' (ಬಿಎಂಶ್ರೀ). ಈ ದೇಶದ ಪುರೋಹಿತಶಾಹಿ ಬೌದ್ಧಧರ್ಮವನ್ನು ಭಾರತದಿಂದ ಹೊರಹಾಕಿರಬಹುದು! ಆದರೆ ಬೌದ್ಧದರ್ಶನದ ಸತ್ವವನ್ನು ಭಾರತದ ಎಲ್ಲ ಅನುಭಾವಿ ಪಂಥಗಳೂ ತಮ್ಮ ನಡೆಯಲ್ಲಿ ಸ್ವೀಕರಿಸಿವೆ. ಲೋಕಕಾರುಣ್ಯ, ಕ್ಷಮೆ, ದಯೆ ಮತ್ತು ಮಾನವ ಪ್ರೇಮದ ಗುಣ ಇರುವುದರಿಂದಲೇ ಬೌದ್ಧಧರ್ಮ ಜಗತ್ತಿನಾದ್ಯಂತ ನದಿಯಂತೆ ವ್ಯಾಪಿಸಿತು ಎನ್ನುವುದು ಲೋಕಸತ್ಯ.

ಕರುಣೆ, ಅಹಿಂಸೆ, ನೈತಿಕ ಸ್ವಾಸ್ಥ್ಯವನ್ನು ಎಚ್ಚರದಿಂದ ಗಮನಿಸುತ್ತಾ ಲೋಕದ ಜೀವಿಗಳೊಂದಿಗೆ ಮೈತ್ರೀ ಭಾವದಿಂದ ಬಾಳುವುದನ್ನು ಬೌದ್ಧದರ್ಶನ ತಿಳಿಸಿಕೊಡುತ್ತದೆ. 'ಸರ್ವಜನ ಸುಖಾಯ; ಸರ್ವಜನ ಹಿತಾಯ'ವನ್ನು ಬಯಸುವುದೇ ಬೌದ್ಧದರ್ಶನದ ತಿರುಳು. ಯಾರು ಅನುದಿನವೂ ಕರುಣಾ ಮೈತ್ರಿ, ಅಹಿಂಸೆಯ ದಾರಿಯಲ್ಲಿ ನಡೆಯುತ್ತಾರೊ, ಅಂಥವರಲ್ಲಿ ಲೋಕಕ್ಕೆ ಕೇಡು ಬಯಸುವ ಗುಣವನ್ನು ಕಾಣುವುದು ಸುಲಭವಲ್ಲ! ಬುದ್ಧ, ಮಹಾವೀರ, ಏಸುಕ್ರಿಸ್ತ ಇವರಿಗೆಲ್ಲಾ 'ಅಹಿಂಸೆ' ಎನ್ನುವುದು ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ನಡೆಯಬೇಕಾದ ನೈತಿಕ ಪಥವಾಗಿತ್ತು. 'ಅಹಿಂಸೆ'ಯೊಂದಿಗೆ 'ಸತ್ಯ' ಮತ್ತು 'ಸತ್ಯಾಗ್ರಹ'ವನ್ನು ಬೆಸೆದುಕೊಂಡ ಗಾಂಧೀಜಿಯವರಲ್ಲಿ ಸಾಮಾಜಿಕ ಮತ್ತು ರಾಜಕೀಯ ವಿಮೋಚನೆಯ ಪಥವಾಗಿ ಅವತರಿಸಿತು. ಬೌದ್ಧದರ್ಶನಕ್ಕೆ ಒಂದು ವಿಶೇಷ ಗುಣವಿದೆ. ಅದು ಇತರ ಧರ್ಮಗಳಂತೆ ಆಯಾ ಧರ್ಮೀಯರಿಗೆ ಮಾತ್ರ ಇರುವಂಥದ್ದಲ್ಲ! ಇದು ಹುಣ್ಣಿಮೆಯ ಬೆಳಕಿನಂತೆ ಜಗತ್ತಿನ ಸಕಲರಿಗೂ ಸಲ್ಲುವಂಥದ್ದು. ಭಗವಾನ್ ಬುದ್ಧನನ್ನು ಕೇವಲ ಬೌದ್ಧಧರ್ಮದ ಸ್ಥಾಪಕನೆಂದು ನೋಡದೆ, ಲೋಕಹಿತಕ್ಕಾಗಿ ನಮ್ಮ ಕಣ್ಣುಗಳನ್ನು ಸ್ವಚ್ಛಗೊಳಿಸಿದ, ಕರುಣಾಮೈತ್ರಿ ಭಾವದ ಜ್ಞಾನಮಾರ್ಗವನ್ನು ತೋರಿಸಿಕೊಟ್ಟ ಲೋಕಗುರು ಎಂದು ತಿಳಿಯುವುದರಲ್ಲೇ ಬೌದ್ಧದರ್ಶನದ ಸಾರ್ಥಕ್ಯವಿದೆ. 'ದಯೆ ಇರುವಲ್ಲೇ ಧರ್ಮವು / ಲೋಭವಿರುವ ಕಡೆ ಪಾಪ! / ಕ್ರೋಧ ಇರುವ ಕಡೆ ನಾಶವು / ಕ್ಷಮೆ ಇರುವ ಕಡೆ ನೀನು!' ಎಂದು ಕಬೀರ ಹೇಳುವುದು ಬೌದ್ಧದರ್ಶನದ ತಿರುಳನ್ನೇ.

'ಧರ್ಮ' ಎನ್ನುವುದು ಇತರ ಜೀವಿಗಳಿಗೆ ಕೇಡು ಬಗೆದು, ಅದರಿಂದ ತಲೆ ತಪ್ಪಿಸಿಕೊಳ್ಳುವ ನೆರಳಾಗಬಾರದು! ಅದು ಅಂತಿಮವಾಗಿ ತಾನು, ತನ್ನದು ಎಂಬ ಸ್ವಾರ್ಥದಿಂದ ಬಿಡಿಸಿಕೊಳ್ಳುವ ಉನ್ನತ ಚಾರಿತ್ರ್ಯ ಮತ್ತು ಲೋಕಹಿತ ಬಯಸುವ ವಿವೇಕದ ಪಥವಾಗಬೇಕು. ಮನುಷ್ಯನು ಎಸಗುವ ಎಲ್ಲ ಒಳಿತು ಮತ್ತು ಕೆಡುಕು ಹುಟ್ಟುವುದು ಮನಸ್ಸಿನಿಂದಲೇ. ಆದ್ದರಿಂದ ಎಲ್ಲ ಕೆಡುಕುಗಳು ಉಂಟಾಗುವ ಮನಸ್ಸನ್ನು ಮಣಿಸುವುದೇ ಬೌದ್ಧದರ್ಶನದ ಮೊದಲ ಕೆಲಸ. ಇದನ್ನೇ ವಚನ ಮಾರ್ಗ 'ತನುವ ಕರಗಿಸಿ ಹರಿವ ಮನವ ನಿಲಿಸುವುದು' 'ಆಸೆಯನಳಿದು, ರೋಷವ ನಿಲಿಸಿ / ಜಗದ ಪಾಶವ ಹರಿದು' ಎಂದಿದೆ. ಮನಸ್ಸನ್ನು ಮಣಿಸದೆ ಎಷ್ಟು ಕಾಲ ಧ್ಯಾನ ಮಾಡಿದರೂ ಅದು ನಿರುಪಯೋಗಿ. ಒಮ್ಮೆ ಬ್ರಾಹ್ಮಣನೊಬ್ಬ ಗಯಾದಲ್ಲಿ ಸ್ನಾನಮಾಡಿ ತನ್ನ ಪಾಪಗಳನ್ನು ಕಳೆದುಕೊಳ್ಳಲು ಹೊರಟ. ಹೊರಡುವ ಮೊದಲು ಬುದ್ಧಗುರುವನ್ನು ಕಂಡು ತಾನು ಗಯಾಕ್ಕೆ ಹೋಗಿ ಸ್ನಾನ ಮಾಡಿಬರುವುದಾಗಿ ಹೇಳಿದ. ಇದನ್ನು ಕೇಳಿದ ಬುದ್ಧಗುರು 'ಅಯ್ಯಾ ಬ್ರಾಹ್ಮಣನೆ, ನೀನು ಎಲ್ಲಿಯಾದರೂ ಸ್ನಾನ ಮಾಡು, ತನ್ನ ಸಹಜೀವಿಗಳ ಬಗೆಗೆ ಅನುಕಂಪದಿಂದ ನಡೆದುಕೊ. ನೀನು ಸುಳ್ಳು ಹೇಳದಿದ್ದರೆ, ಜೀವಹಾನಿ ಮಾಡದಿದ್ದರೆ, ನಿನಗೆ ನೀಡದ್ದನ್ನು ತೆಗೆದುಕೊಳ್ಳದಿದ್ದರೆ, ನಿನ್ನೊಳಗಿನ ವ್ಯಸನ, ಲೋಭ, ರೋಷವನ್ನು ಕಳೆದುಕೊಳ್ಳದಿದ್ದರೆ, ನೀನು ಗಯೆಯಲ್ಲಿ ಸ್ನಾನ ಮಾಡಿದರೆ ಏನು ಫಲ? ಯಾವ ಕೇಡನ್ನೂ ನೀನು ಮಾಡದಿದ್ದರೆ, ನಿನಗೆ ಎಲ್ಲ ನೀರೂ ಗಯೆಯ ನೀರಿನಷ್ಟೇ ಪವಿತ್ರವಾಗಿರುತ್ತದೆ'.

ಬುದ್ಧ ತೋರಿದ ದಾರಿಯಲ್ಲಿ ನಾವು ಏನೇನು ಕಳೆದುಕೊಳ್ಳಬೇಕೋ ಅದೆಲ್ಲವನ್ನೂ ಕಳೆದುಕೊಂಡು, ಏನನ್ನು ಪಡೆದುಕೊಳ್ಳಬೇಕೋ ಅದೆಲ್ಲವನ್ನೂ ಪಡೆದುಕೊಳ್ಳುವುದು. ಹೀಗೆ ಕಳೆದುಕೊಳ್ಳುವುದು ಮತ್ತು ಪಡೆದುಕೊಳ್ಳುವುದರಿಂದಲೇ ಸಿದ್ಧಾರ್ಥ ಬುದ್ಧನಾದದ್ದು. ಬುದ್ಧದೇವನೆ ನಮ್ಮನ್ನು ಕೈ ಹಿಡಿದು ಬೋಧಿ ಮಾರ್ಗದಲ್ಲಿ ಕರೆದೊಯ್ಯುತ್ತಾನೆ ಎಂಬುದು ಸಲ್ಲದ ಮಾತು. ಬುದ್ಧದೇವ ಕೇವಲ ದಾರಿ ತೋರುವವನು ಮಾತ್ರ. ಅಂತಿಮವಾಗಿ ಆ ದಾರಿಯಲ್ಲಿ ನಡೆಯುವವರು ನಾವೆ. ಇದನ್ನೇ ಬೌದ್ಧರು 'ಏಕಾಯನ' ಎನ್ನುತ್ತಾರೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮನಸ್ಸಿದ್ದರೆ ನಾವು ಅಂದುಕೊಂಡಿರುವ ಗುರಿ ಸಾಧಿಸಬಹುದು.
  —ಬುದ್ಧ
- ಒಂದು ಲಿಲ್ಲಿಯಾಗಲಿ ಅಥವಾ ಗುಲಾಬಿಯಾಗಲಿ ಎಂದಿಗೂ ನಟಿಸುವುದಿಲ್ಲ. ತನ್ನ ಮೂಲಗುಣಕ್ಕೆ ತಕ್ಕಂತೆ ಇರುವುದೇ ಅದರ ಸೌಂದರ್ಯದ ಗುಟ್ಟು.
  —ಜಿಡ್ಡು ಕೃಷ್ಣಮೂರ್ತಿ
- ಎಲ್ಲಿಯ ತನಕ ನೀವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದಿಲ್ಲವೋ ಅಲ್ಲಿಯ ತನಕ ಕಾನೂನು ಒದಗಿಸುವ ಯಾವುದೇ ಸ್ವಾತಂತ್ರ್ಯವನ್ನು ಪಡೆದರೂ ಅದರ ಪ್ರಯೋಜನ ಬರುವುದಿಲ್ಲ.
  —ಅಂಬೇಡ್ಕರ್
- ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರನಿಗೆ ದಯೆ ಹುಟ್ಟೀತೆ?
  —ಪುರಂದರದಾಸ
- ಮನೆಯನ್ನು ಸಮರ್ಥವಾಗಿ ನಿಭಾಯಿಸುವ ತಾಕತ್ತಿರುವ ಪ್ರತಿ ಮಹಿಳೆಗೆ ದೇಶವನ್ನೂ ಮುನ್ನಡೆಸುವ ಸಾಮರ್ಥ್ಯ ಇರುತ್ತದೆ.
  —ಮಾರ್ಗರೆಟ್ ಥ್ಯಾಚರ್
- ಪ್ರೇಮ ಮರದಲ್ಲಿ ಬೆಳೆಯುವುದಿಲ್ಲ, ಪ್ರೇಮ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಪ್ರೇಮ ನಿನಗೆ ಬೇಕಾಗಿದ್ದರೆ ಪ್ರೇಮ ಕೊಡುವುದು ಗೊತ್ತಿರಬೇಕು, ಕಾರಣವಿಲ್ಲದೆ ವಿನಾಕಾರಣ.
  —ಸಂತ ಕಬೀರ